# ಕುಲ ಕುಲವೆಂದು

ಪ್ರತಿದಿನ ಭಾರತದಲ್ಲಿ ವಿರೂಪಗೊಳಿಸಿದ ಧರ್ಮ, ಹಣ ಹಾಗೂ ಅಧಿಕಾರದ ದೌಲು ಮತ್ತು ಜಾತಿಪದ್ಧತಿ ಈ ವ್ಯವಸ್ಥೆಗಳು ಸಂಘಟನಾತ್ಮಕವಾಗಿ ಕೆಳಸಮುದಾಯಗಳು, ಮಹಿಳೆಯರು ಹಾಗೂ ಅಲ್ಪಸಂಖ್ಯಾತರ ಮೇಲೆ ನಿರ್ದಯೆಯಿಂದ ಎಸಗುತ್ತಿರುವ ದುರಂತಗಳನ್ನು ವಿವರಿಸಲು ಗಂಟಲುಕಟ್ಟುತ್ತದೆ. ಈ ಕಾರಣಕ್ಕೇ ಬಾಬಾ ಸಾಹೇಬ್ ಅಂಬೇಡ್ಕರ್ 'ವರ್ಗ ಮತ್ತು ಜಾತಿ ಇವೆರಡೂ ನೆರೆಹೊರೆಯವರು. ಜಾತಿ ಬಾಗಿಲು ಮುಚ್ಚಿಕೊಂಡ ವರ್ಗ' ಎನ್ನುತ್ತಾರೆ. ಅಸ್ಪೃಶ್ಯತೆಯ ಆಚರಣೆ, ಬಹಿಷ್ಕಾರ, ದ್ವೇಷ, ಪ್ರತೀಕಾರ ಇವೆಲ್ಲವೂ ಇಂದು ಭಾರತೀಯ ಸಮಾಜದ ಆತ್ಮಕ್ಕಂಟಿರುವ ಕಳಂಕಗಳಾಗಿವೆ. ಆಶ್ಚರ್ಯದ ಮಾತೆಂದರೆ, ದಲಿತ, ಹಿಂದುಳಿದ ಜಾತಿ, ಸ್ತ್ರೀಯರು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ತಾವು ಎಸಗುತ್ತಿರುವ ಈ ಎಲ್ಲ ಕ್ರೌರ್ಯಗಳು; ಕ್ರೌರ್ಯಗಳಲ್ಲವೆಂದೇ ದಾಳಿ ಎಸಗುವವರು ಭಾವಿಸಿರುವುದನ್ನು ನೋಡಿದರೆ, ಎಲ್ಲರೂ ಕೂಡಿ ಬಾಳಬೇಕಾಗಿದ್ದ ಭಾರತದ ಆತ್ಮ ಇಂದು ಕತ್ತಲಕೂಪದಲ್ಲಿದೆ ಎಂದೇ ಅರ್ಥ!

ದೇವರ ಕೋಲನ್ನು ಏನೂ ಅರಿಯದ ಬಾಲಕ ಮುಟ್ಟಿದ ಎನ್ನುವ ಕಾರಣಕ್ಕೆ ಅವರಿಗೆ ದಂಡ ವಿಧಿಸುವ ಮನಸ್ಸುಗಳು, ಜಾತಿ ಶ್ರೇಷ್ಠತೆಯ ವ್ಯಸನದಿಂದ ಕುರುಡಾದವರು ಹಿಂದುಮುಂದು ನೋಡದೆ ಯುವಕನೊಬ್ಬನ ಕೈಯನ್ನೇ ತುಂಡರಿಸುವ ಮನಸ್ಸು, ಪ್ರೇಮವನ್ನೇ ನಿರಾಕರಿಸಿದ ಕಾರಣಕ್ಕೆ ಬಾಲಕಿಯ ತಲೆಯನ್ನೇ ಕಡಿಯುವ ಮನಸ್ಸು, ದೇವರ ಮುಂದೆ ವಾದ್ಯ ನುಡಿಸಲಿಲ್ಲ ಎನ್ನುವ ಕಾರಣಕ್ಕೆ ಸಾಮಾಜಿಕ ಬಹಿಷ್ಕಾರ ಹಾಕುವ, ತಳ ಸಮುದಾಯದವರು ಕುಡಿಯುವ ನೀರಿನ ಸಂಗ್ರಹಕ್ಕೆ ಮಲ ಬೆರೆಸುವ ಮನಸ್ಸುಗಳು, ಹೆಣ್ಣುಮಕ್ಕಳನ್ನು ಅವರ ತಂದೆ–ತಾಯಿಗಳ ಎದುರಿನಲ್ಲೇ ಸುಟ್ಟುಹಾಕುವ ಮನಸ್ಸುಗಳು ಇನ್ನೂ ಸಮಾಜದಲ್ಲಿವೆ. ಈ ಹೊಲಬುಗೆಟ್ಟ ಕೃತ್ಯಗಳೆಲ್ಲ ಸಮಾಜದಲ್ಲಿರುವುದೇ ಮಾನವೀಯತೆಗೆ ಕಳಂಕವಾಗಿದೆ. ಹಣ, ಅಧಿಕಾರದ ಮದ ಜೊತೆಗೆ ಜಾತೀಯತೆಯ ಸೂಕ್ಷ್ಮ ಕ್ರೌರ್ಯ ನಗರ ಮತ್ತು ಪಟ್ಟಣಗಳಲ್ಲಿ ಮುಂಚೂಣಿಯಲ್ಲಿದ್ದರೆ; ಜಾತಿಪದ್ಧತಿಯ ಅಮಾನುಷ ಆಚರಣೆಗಳು ಭಾರತದ ಹಳ್ಳಿಗಳಲ್ಲಿ ಎಗ್ಗಿಲ್ಲದಂತೆ ನಡೆಯುತ್ತಿವೆ. ಇವೆಲ್ಲವನ್ನೂ ನೋಡುತ್ತಿದ್ದರೆ ಜೀವ ಕಳವಳಿಸುತ್ತದೆ. ಪಶ್ಚಾತ್ತಾಪವಿಲ್ಲದ ಮನಸ್ಸು ಯಾವಾಗಲೂ ವಿಕೃತ ಹಿಂಸೆಯಲ್ಲಿಯೇ ಉನ್ಮಾದಗೊಳ್ಳುತ್ತಿರುತ್ತದೆ ಎನ್ನುವುದಕ್ಕೆ ನಮ್ಮ ಕಣ್ಣ ಮುಂದೆ ನಡೆಯುತ್ತಿರುವ ಇಂತಹ ಘಟನೆಗಳೇ ಸಾಕ್ಷಿ. ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳ ಮೇಲೂ ಅದರ ಮಾಲೀಕನ ಹೆಸರನ್ನು ಬರೆಸಬೇಕು ಎಂಬ ಹುಂಬ ಹುಕ್ಕುಂ ಕೂಡ ಇದರಷ್ಟೇ ಘಾತುಕತನದಿಂದ ಕೂಡಿರುವಂಥದ್ದು! ಅಗೋಚರ ಹಿಂಸೆಯಿಂದ ಕೂಡಿರುವ ಈ ಬಗೆಯ ಕೃತ್ಯಗಳು ಸಮಾಜವನ್ನು ಶಾಶ್ವತವಾಗಿ ಒಡೆಯುತ್ತಿವೆ. ಇಂತಹ ಅಸಹ್ಯಕರ ರಾಜಕೀಯ ಪ್ರೇರಿತ ದಾಳಿಗಳೆಲ್ಲವೂ ಶಿಕ್ಷಾರ್ಹ ಅಪರಾಧವೆಂದೇ ಪರಿಗಣಿಸಬೇಕು. ಎಲ್ಲರ ಮನೆಯಲ್ಲಿರುವ ದೇವರು ಮತ್ತು ಧರ್ಮ ಮಡಿ ಮೈಲಿಗೆ ತೊಡೆದುಕೊಂಡು ಎಲ್ಲರ ಏಳಿಗೆಗಾಗಿ, ಎಲ್ಲರೊಡನೆ ಬೆರೆಯುತ್ತಿದ್ದ ದಿನಗಳೂ ಇದ್ದವು. ಇಂಥ ದೇವರು ಮತ್ತು ಧರ್ಮದಲ್ಲಿ ಇಷ್ಟೊಂದು ಹಿಂಸ್ರಕ ಗುಣಗಳನ್ನು ತುಂಬಿದವರು ಯಾರು? ಮನುಕುಲ ಸೃಷ್ಟಿಸಿದ ದೇವರು ಮತ್ತು ಧರ್ಮಗಳಂಥ ಪರಿಪೂರ್ಣ ಕಲೆಗಳನ್ನು ಅಪವಿತ್ರಗೊಳಿಸಿದವರಾರು?

ಆಧುನಿಕ ಶಿಕ್ಷಣದಿಂದಲಾದರೂ ಜಾತೀಯತೆ ಮತ್ತು ಅವೈಚಾರಿಕತೆ ಕಡಿಮೆಯಾಗಿ, ಜಾತಿಪದ್ಧತಿ ಮತ್ತು ಮೌಢ್ಯಗಳು ಹಾಗೂ ಅನಾಗರಿಕ ನಡವಳಿಕೆಗಳು ಸಡಿಲಗೊಳ್ಳಬಹುದೆಂದು ಉದಾರವಾದಿಗಳು ಕನಸು ಕಂಡಿದ್ದರು. ಏಕೆಂದರೆ, ಯಾವುದೇ ಆರೋಗ್ಯವಂತ ಸಮಾಜ ತನ್ನ ಸರ್ವತೋಮುಖ ಏಳಿಗೆಗಾಗಿ, ಸಮಾನತೆಯನ್ನು ಸಾಧಿಸುವುದಕ್ಕಾಗಿ ಕೊಡುವ ಶಿಕ್ಷಣ, ಈ ಅನಾರೋಗ್ಯಕರ ವ್ಯವಸ್ಥೆಯಲ್ಲಿ ಜಾತೀಯತೆ ಮತ್ತು ಪ್ರತ್ಯೇಕತೆಯನ್ನು ಮತ್ತಷ್ಟು ಹೆಚ್ಚಿಸುವುದಕ್ಕೆ ಕಾರಣವಾದರೆ ಯಾರನ್ನು ದೂರುವುದು? ಚರಿತ್ರೆ ಹೇಳುವಂತೆ, ಜಾತಿಪದ್ಧತಿಯ ಕ್ರೌರ್ಯಕ್ಕೆ ಮೊದಲು ಬಲಿಯಾಗುವವರು ದಲಿತರು, ಮಹಿಳೆಯರು ಮತ್ತು ಹಿಂದುಳಿದ ಸಮುದಾಯಗಳು. ಪ್ರತಿದಿನವೂ ಒಂದಲ್ಲ ಒಂದು ರೂಪದಲ್ಲಿ ಈ ನತದೃಷ್ಟ ಸಮುದಾಯಗಳ ರಕ್ತ ಈ ನೆಲಕ್ಕೆ ಸೋರುತ್ತಲೇ ಇದೆ! 'ನಾವು ಇರಬೇಕಾದದ್ದು ಹೀಗೆಯೇ' ಎಂದು ಈ ಸಮುದಾಯಗಳ ಮೆದುಳಿನಲ್ಲಿ ತೊಡೆಯಲಾರದ ಲಿಪಿಯಾಗಿ ಅಚ್ಚೊತ್ತಿದೆ. ಇದರಿಂದಾಗಿ ದಮನಿತ ಸಮುದಾಯಗಳ ಚೈತನ್ಯವೇ ಉಡುಗಿಹೋಗಿದೆ. ಸಂತರವಾಣಿ ಕೇಳುತ್ತದೆ: 'ಆತ್ಮ ಯಾವ ಕುಲ ಜೀವ ಯಾವ ಕುಲ?'. ಈ ರೀತಿ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಧ್ವನಿ ಇಲ್ಲದೆ ಅಸಹಾಯಕವಾಗಿರುವ ಸಮುದಾಯಗಳನ್ನು ದಮನ ಮಾಡುವುದೇ ಭಾರತದಲ್ಲಿ ಒಂದು ಸಂಪ್ರದಾಯವಾಗಿಯೇ ಮುಂದುವರೆಯುತ್ತಿದೆ. ಬಹುಪಾಲು ವ್ಯಕ್ತಿಪೂಜೆಗಷ್ಟೇ ಸೀಮಿತವಾಗಿರುವ ಇಂದಿನ ರಾಜಕೀಯ ವ್ಯವಸ್ಥೆಯಿಂದ ದಮನಿತ ಸಮುದಾಯಗಳು ಯಾವ ಪರಿಹಾರವನ್ನೂ ಪಡೆಯಲಾರವು!

ಜಗತ್ತಿನ ಯಾವುದೇ ರಾಷ್ಟ್ರಕ್ಕೂ ಇಲ್ಲದಿರುವಷ್ಟು ಮಾನವ ಸಂಪನ್ಮೂಲ ಇರುವ ಭಾರತ ಇಂದು ಹಸಿವು, ಬಡತನ, ಪೌಷ್ಟಿಕತೆ, ಶಿಕ್ಷಣದ ಗುಣಮಟ್ಟ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಉದ್ಯೋಗದ ಸೂಚ್ಯಂಕದಲ್ಲಿ ಅತ್ಯಂತ ಕಳಪೆ ಸಾಧನೆ ಮಾಡಿದೆ. ಆದರೆ ವರ್ಗ ಭೇದ ಮತ್ತು ಜಾತಿ ಭೇದವನ್ನು ಆಚರಿಸುವುದರಲ್ಲಿ ಏರು ಸ್ಥಾನದಲ್ಲಿದೆ. ಇವುಗಳ ನಿವಾರಣೆಗೆ ಇರುವ ದಾರಿಗಳಲ್ಲಿ, ರಾಜಕೀಯ ಕ್ಷೇತ್ರದ ಎಲ್ಲಾ ಘಟಕಗಳಲ್ಲಿ ಕೆಳಸಮುದಾಯ ಮತ್ತು ಮಹಿಳೆಯರಿಗೆ ಶೇಕಡ 60ರಷ್ಟಾದರೂ ಪ್ರಾತಿನಿಧ್ಯವನ್ನು ಕಲ್ಪಿಸಿಕೊಡಬೇಕು ಎಂದು 60ರ ದಶಕದಲ್ಲೇ ರಾಮಮನೋಹರ ಲೋಹಿಯಾ ಅವರ ಸಮಾಜವಾದಿ ಪಕ್ಷ ಒಂದು ಗೊತ್ತುವಳಿಯನ್ನು ಸ್ವೀಕರಿಸಿತ್ತು. ಇದರಿಂದಾಗಿ ಸಮಾಜದ ಸ್ವಾತಂತ್ರ್ಯವನ್ನು ವರ್ಧಿಸುವ ಸಮಾನತೆ ಮತ್ತು ಬಹುತ್ವದ ಮೌಲ್ಯಗಳು ಕಾರ್ಯರೂಪಕ್ಕೆ ಬರುತ್ತವೆ ಎಂದು ಭಾವಿಸಲಾಗಿತ್ತು. ಈಗ ಅಧಿಕಾರವನ್ನು ನಡೆಸುವವರಲ್ಲಿ ಶೇಕಡ 90ರಷ್ಟು ಭಾಗ, ಮೇಧಾವಿಗಳು ಹಾಗೂ ಪಾಂಡಿತ್ಯವುಳ್ಳವರ ರೂಪದಲ್ಲಿರುವ ಕೆಲವೇ ವರ್ಗದವರಿಂದ ನಡೆಯುತ್ತಿದೆ. ಇದರಿಂದಾಗಿ ರಾಜಕೀಯ ಪ್ರಾತಿನಿಧೀಕರಣ ಇಲ್ಲದ ದಮನಿತ ಸಮುದಾಯಗಳಿಗೆ ಸಾಮಾಜಿಕನ್ಯಾಯ ಎಂಬುದು ಮರೀಚಿಕೆಯಾಗಿಯೇ ಉಳಿದಿದೆ ಎಂದು ಲೋಹಿಯಾ ಹೇಳುತ್ತಾರೆ. ದಮನಿತ ಸಮುದಾಯಗಳಿಗೆ ಶೇಕಡ 60ರಷ್ಟು ರಾಜಕೀಯ ಮೀಸಲಾತಿ ದೊರೆಯುವವರೆಗೆ, ಸಮಾನತೆಯ ಸಮಾಜದ ಬಗ್ಗೆ ಮತ್ತು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುವುದು ಕುಚೋದ್ಯವಾಗುತ್ತದೆ ಎಂದು ಲೋಹಿಯಾ ಹೇಳಿದ್ದರು.

ಬಡವರು, ನಿರ್ಗತಿಕರು ಎಲ್ಲಿಯವರೆಗೆ ಸ್ವಾಭಿಮಾನದಿಂದ ತಲೆಯೆತ್ತಿ ನಿಲ್ಲಲಾರದಂಥ ವ್ಯವಸ್ಥೆ ಇರುತ್ತದೋ ಅಲ್ಲಿಯವರೆಗೆ ಯಾವ ದೇಶವೂ ಸುಖಿಯಾಗಿರದು! 'ಜನವು ನಗುವುದನ್ನು ಮರೆತರೆ, ನಾಡಿಗೆ ಕೇಡುಗಾಲ ಬಂದೀತೆಂದು ಬಗೆಯಬೇಕು' ಎಂದು ಬಹುಹಿಂದೆಯೇ ಶಂಬಾ ಜೋಷಿ ಹೇಳಿದ್ದರು.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಭಕ್ತಿ ನಂಬುಗೆ ಸುಲಭ, ಭಜನೆ ವಂದನೆ ಸುಲಭ; ತತ್ವಶೋಧನೆ ಕಷ್ಟ, ಮತಿಕಾರ್ಯ ಕಷ್ಟ!
  —ಡಿವಿಜಿ
- ನಾವು ಹುಟ್ಟಿದ ಸಮಾಜಕ್ಕೆ ಸಲ್ಲಿಸಬೇಕಾದ ಋಣ ಸಮಾಜ ಸೇವೆ.
  —ಟಿ.ಪಿ. ಕೈಲಾಸಂ
- ಮನುಷ್ಯನ ಜೀವನದಲ್ಲಿ ಸುಖ, ದುಃಖ ಎಂಬುದಿಲ್ಲ. ಅಲ್ಲಿರುವುದು ಅನುಭವಗಳು ಮಾತ್ರ.
  —ಭಗವದ್ಗೀತೆ
- ಹಸಿವನ್ನು ರೋಗವೆಂದು ತಿಳಿ. ರೋಗಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಆಹಾರವನ್ನು ಔಷಧದಂತೆ ಸೇವಿಸು.
  —ಶಂಕರಾಚಾರ್ಯ
- ಬೇರೆಯವರನ್ನು ತೆಗಳುವುದರಿಂದ ನಿಮ್ಮ ವ್ಯಕ್ತಿತ್ವಕ್ಕೇ ಹೆಚ್ಚು ಕುಂದುಂಟಾಗುತ್ತದೆ.
  —ಶಿವರಾಮ ಕಾರಂತ